ಹೆಚ್.ವಿ. ಶ್ರೀಧರ್, ಬೆಂಗಳೂರು

ಇಷ್ಟೊಂದು ಮುಂದುವರಿದ ತಂತ್ರಜ್ಞಾನ ಕಾಲವನ್ನು ಹಳಿದು ಹಿರಿಯರು 'ನಮ್ಮಾಕ್ಲೇ ಚೆನ್ನಿತ್ತು' ಎನ್ನುವರಲ್ಲ?



ಅವರವರ ದೃಷ್ಟಿ ಅವರವರಿಗೆ. ನಿಮಗೆ ತಂತ್ರಜ್ಞಾನ ಮುಖ್ಯ; ಅವರಿಗೆ ಮಾನವೀಯತೆ.

ಮಾಲತೇಶ ಪಾಟೀಲ, ಹುಬ್ಬಳ್ಳಿ

ಗಂಡಸರಿಗಿಂತ ಹೆಂಗಸರು ಹೆಚ್ಚು ದಿನ ಬದುಕಲು ಕಾರಣವೇನು?

'ಗಂಡಿಗೆ ಜವಾಬ್ದಾರಿ ಇಲ್ಲ. ಹೋಗ್ಬಿಡ್ತಾನೆ. ಮೊಮ್ಮಕ್ಕಳನ್ನ ಪೋಷಿಸ್ಬೇಕಲ್ಲ!' ಎಂದಳಾ ಅಜ್ಜಿ.

ಕಮಲಾ ರಾವ್, ಬೆಂಗಳೂರು

ಜಗಳ ಗಲಾಟೆ ಮಾಡಿಕೊಳ್ಳುವವರಿಗೇ ದೊಡ್ಡ ಬಹುಮಾನ, ಪಟ್ಟ ಸಿಗುತ್ತದಲ್ಲಾ?

ಮಾಧ್ಯಮ ನಿಯಮ; ಸದ್ದಿಗಿರುವ ಆದ್ಯತೆ ಸುದ್ದಿಗಿಲ್ಲ!

ವಿ. ಹೇಮಂತಕುಮಾರ್, ಬೆಂಗಳೂರು

ಹೊಗಳಿಕೆಗೆ ಹೆಂಡತಿ ಒಲಿಯುತ್ತಾಳಂತೆ. ಹೌದಾ?



ಯಾರ ಹೆಂಡತಿ? ಸ್ವಂತ ಹೆಂಡತಿಗೆ ಪತಿಯ ಹೊಗಳಿಕೆ ಸಂಶಯಕ್ಕೆ ದಾರಿ.

ಪಿ.ಜೆ. ರಾಘವೇಂದ್ರ, ಮೈಸೂರು

ಅಪ್ರಾಪ್ತರಿಗೂ, ಅತೃಪ್ತರಿಗೂ ಏನು ವ್ಯತ್ಯಾಸ?

ಅಪ್ರಾಪ್ತರದು ರಿಂಗ್‌ಟೋನ್ ಮೋಡ್; ಅತೃಪ್ತರದು ವೈಬ್ರೇಷನ್ ಮೋಡ್.

ಷಣ್ಮುಖ ಎಸ್.ಹೆಚ್. ಹಳೇಬಾತೀ ಗ್ರಾಮ

ಹುಡುಗಿಯರ ಅಂತರಂಗದ ಪರಿಯ ತಿಳಿಯುವುದು ಹೇಗೆ?

ಬಹಳ ಸುಲಭ. ಅವರ ಎಕ್ಸ್, ಇನ್‌ಸ್ಟಾ, ಎಫ್‌ಬಿ ಅಕೌಂಟ್ ವೀಕ್ಷಿಸಿದರಾಯ್ತು.

ಶೋಭಾ ಸಂಪತ್, ಬೆಂಗಳೂರು

ಪ್ರತಿಯೊಂದು ಪ್ರಶ್ನೆಗೂ ವ್ವಾವ್ ಎನಿಸುವಂತಹ ಉತ್ತರ ನಿಮಗೆ ಹೊಳೆಯುವುದಾದರೂ ಹೇಗೆ?

ಹಾಗೇನಿಲ್ಲ. ಕೆಲವು ಉತ್ತರಗಳು ಹಹ್ಹಹ್ಹ ಎನ್ನುವಂತೆಯೂ ಇರುತ್ತವೆ.

ಮುರಲೀಧರ ಕುಲಕರ್ಣಿ, ಬೀದರ್

ಬರಬರುತ್ತಾ ಕನ್ನಡ ಭಾಷೆಯಲ್ಲಿ ಮಹಾಪ್ರಾಣಗಳು ಉಳಿಯಬಹುದೆ?

ಸ್ವಾಲ್ ಬರೆಯುವ ಮೂಢರೇ ಗುರುಗಳಾದರೆ ಭಾಷೆಯ ಪ್ರಾಣ ಉಳಿಯುವುದೇ ಕಷ್ಟ.

ಸಿಹಿಮೊಗೆ ರಮೇಶ್, ಮೈಸೂರು

'ಬಿಗ್ ಬಾಸ್' ರಿಯಾಲಿಟಿ ಶೋನಿಂದ ಸಮಾಜಕ್ಕೆ ಕೊಡುವ ಸಂದೇಶ?

'ಕಾಸಿನಾಸೆಗೆ ಮನುಷ್ಯನು ಹೇಳಿದಹಂಗ್ ಕೇಳ್ಕೊಂಡು ಬೋನಿನಲ್ಲಿ ಬಿದ್ದಿರ್ತಾನೆ' ಎನ್ನುವುದು.

ಚೈತ್ರ ತೊಪ್ಪಲದ, ಬ್ಯಾಡಗಿ

ಸೂತ್ರಧಾರಿಗೂ, ಪಾತ್ರಧಾರಿಗೂ ಇರುವ ವ್ಯತ್ಯಾಸವೇನು?

ಸೂತ್ರಧಾರ ಸ್ಟೀರಿಂಗ್ ವೀಲ್; ಪಾತ್ರಧಾರಿ ಚಕ್ರ.

ಅಮರಯ್ಯಾ ಪತ್ರಿಮಠ, ಸುರಪುರ

ಸಾಮಗ್ರಿಗಳ ಬೆಲೆ ಗಗನಕ್ಕೇರಿದರೂ ಕೆಲವರು ನಿಶ್ಚಿಂತೆಯಿಂದ ಇರುತ್ತಾರಲ್ಲ?

ಚಿಂತಿಸಿದರೆ ಬೆಲೆ ಇಳಿಯುವುದಿಲ್ಲ, ದುಡಿಯಬೇಕು ಎಂದು ಅವರಿಗೆ ತಿಳಿದಿದೆ.

ಬಿ. ಚಂದ್ರೇಗೌಡ, ಬೆಂಗಳೂರು

ದನಕ್ಕೂ, ಸದನಕ್ಕೂ ಏನು ವ್ಯತ್ಯಾಸ?

ದನ ಕೊಟ್ಟ ಹಿಂಡಿ ತಿನ್ನುತ್ತದೆ; ಸದನದವರು ಸಮಾಜವನ್ನು ಹಿಂಡಿ ಹಿಂಡಿ ತಿನ್ನುತ್ತಾರೆ.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು

ಸ್ವರ್ಗಕ್ಕೆ ಮೂರು ಗೇಣು ಅಂತಾರಲ್ಲಾ, ಏನದು?

ಅಪ್ಸರೆ, ಇಂದ್ರಪದವಿ, ಅಮರತ್ವ ಎಂಬ ಗೇಣುಗಳೇ ಬಾಕಿ ಎಂದು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ವಿಷ ಕುಡಿದವರು ಹಾಗಲಕಾಯಿ ತಿಂದರೆ?

ಅವರೇಕೆ ತಿನ್ನಬೇಕು? ಅವರ ಶ್ರಾದ್ಧಕ್ಕೆ ಬಂದವರು ತಿನ್ನುತ್ತಾರೆ ಬಿಡಿ.

## ಬಹುಮಾನಿತ ಪ್ರಶ್ನೆ

ಜಗದೀಶ ಬಿ. ಹೊಸೂರು, ಮೈಸೂರು

ಟೀವಿ ಧಾರಾವಾಹಿಗೆ ಕಥೆ ಬರೆಯುವವರನ್ನು ಸಾಲಾಗಿ ನಿಲ್ಲಿಸಿ ಪಾದಕ್ಕೆ ನಮಿಸುವ ಆಸೆಯಿದೆ. ಸಹಕರಿಸುವಿರಾ?

ಸಹಕರಿಸಬಹುದು, ಆದರೆ ವಕ್ರ ಕಥೆಗಳನ್ನೇ ಬರೆದವರು ಸಾಲಾಗಿ ನಿಲ್ಲುವುದೇ ಡೌಟು.

ಬಿದರಹಳ್ಳಿ ನಾಗರಾಜ್, ಹಿರೇಹಡಗಲಿ

ಪುಸ್ತಕಗಳನ್ನು ಪ್ರೀತಿಸುವವರಿಗೆ ಸ್ನೇಹಿತರ ಅಗತ್ಯವಿಲ್ಲ ಅಂತಾರೆ. ಇದು ನಿಜಾನಾ ಸಾರ್?

ಓದು ಫಲಪ್ರದವಾಗುವುದು ಹಂಚಿಕೊಂಡಾಗಲೇ. ಸಖನಿಲ್ಲದ ಓದುಗ ವಾಕ್ಯವಿಲ್ಲದ ನಿಘಂಟಿನಂತೆ.

ಪಿ. ಜಯವಂತ ಪೈ, ಕುಂದಾಪುರ

ತಿರುಪತಿ ದೇವಸ್ಥಾನದ ಅರ್ಚಕನೊಬ್ಬ ದೇವಳದ ಹುಂಡಿಯ ಹಣವನ್ನು ಕದಿಯುತ್ತಿದ್ದನಂತಲ್ಲ?

'ಹೇಗೂ ದೇವನ ಸಾಲ ತೀರಲ್ಲ. ನನ್ನದಾದರೂ ತೀರಿಸಿಕೊಳ್ಳೋಣ' ಎಂಬ ಆಲೋಚನೆಯಂತೆ.

ಗುರುರಾಜ್ ಕನ್ನೂರ, ಬಸವನಬಾಗೇವಾಡಿ

ಪೂಜೆಗೂ, ಪೂಜಾರಿಗೂ ಇರುವ ವ್ಯತ್ಯಾಸವೇನು?



ಪೂಜೆಗೆ ಸಮರ್ಪಣೆ ಅಗತ್ಯ; ಪೂಜಾರಿಗೆ some ಅರ್ಪಣೆ ಅವಶ್ಯ.

ರಮೇಶ್ ಜ. ಬೊಂಗಾಳೆ, ಬೈಲಹೊಂಗಲ

ಚಿತ್ರರಂಗಕ್ಕೂ, ರಾಜಕೀಯ ರಂಗಕ್ಕೂ ಇರುವ ವ್ಯತ್ಯಾಸವೇನು?

ಚಿತ್ರರಂಗ ಕಲ್ಪನಾ ಲೋಕ; ರಾಜಕೀಯ ಜಲ್ಪನಾ ಲೋಕ.

ಕಾಳಿಹುಂಡಿ ಶಿವಕುಮಾರ್, ಮೈಸೂರು

ಒಲಿದ ಜೀವ ಜೊತೆಯಲ್ಲಿದ್ದರೂ ಹಲವರಿಗೆ ಬಾಳು ಸುಂದರವಾಗಲಿಲ್ಲವಲ್ಲ?

ಒಲಿದಂತೆ ಜೊತೆ ಇರಲು ಅಂತಿಷ್ಟು ಷರತ್ತುಗಳು ಇದ್ದವಂತಲ್ಲ.

■ ರಾಮ್